ಕರ್ನಾಟಕ ವಿಧಾನ ಸಭೆ

ಗುರುವಾರ ದಿನಾಂಕ: 6ನೇ ಏಪ್ರಿಲ್ 2006 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 28 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಕ್ವಶ್ಚನ್ ಅವರ್ ತೆಗೆದುಕೊಂಡು ಬಿಡಿ ಸರ್. ಬಿಲ್‌ನವರು ಯಾರು ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಜೀರೊ ಅವರ್ ಆಗಿ ಬಿಡಲಿ.

ಶ್ರೀ ಜಗದೀಶ್ ಶೆಟ್ಟರ್ : ಇಂಟ್ರಡಕ್ಷನ್ ಮಾಡುವುದಕ್ಕೆ ಮಾನ್ಯ ಉದಾಸಿಯವರು ಇದ್ದಾರೆ.

ಅಧ್ಯಕ್ಷರು : ನೋಡಿ ಮಾನ್ಯ ಖರ್ಗೆಯವರೆ, ಕಾರ್ಯಕ್ರಮ ಪಟ್ಟಿಯಲ್ಲಿ ಮೊದಲು ವಿಧೇಯಕಗಳನ್ನು ಹಾಕಿ ಬಿಟ್ಟಿದ್ದೇವೆ. ಅದು ಆದ ಮೇಲೆ ಪ್ರಶ್ನೋತ್ತರ ತೆಗೆದುಕೊಳ್ಳೋಣ. ಜೀರೊ ಅವರ್ ಕೂಡ ಇರುತ್ತದೆ.

1. ಚುನಾವಣೆಯ ಪ್ರಸ್ತಾವ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ದಿನಾಂಕ: 4–4–2006 ರಂದು ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಚುನಾವಣೆಯ ಪ್ರಸ್ತಾಪವನ್ನು ಮಂಡಿಸಿದ್ದು, ಚುನಾವಣೆ ಕಾರ್ಯಕ್ರಮಗಳ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಆದರೆ ಈ ದಿನ ಅಧಿವೇಶನ ಮುಕ್ತಾಯಗೊಳ್ಳುತ್ತಿರುವುದರಿಂದ ಕರ್ನಾಟಕ ಗ್ರಂಥಾಲಯ ಪ್ರಾಧಿಕಾರಕ್ಕೆ ಒಬ್ಬ ವಿಧಾನಸಭೆ ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಮಂಡಿಸಿರುವ ಪ್ರಸ್ತಾವಕ್ಕೆ ಸದನದ ಸಹಮತಿ ಇದೆ ಎಂದು ಭಾವಿಸುತ್ತೇನೆ. ಮಾನ್ಯ ಉದಾಸಿಯವರೆ, ನಿಮ್ಮ ಬಿಲ್‌ನ್ನು ಮಂಡನೆ ಮಾಡಿ.

2. ಶಾಸನ ರಚನೆ.

ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ 2006 (ಮಂಡನೆಗೆ ವಿರೋಧ ವ್ಯಕ್ತಪಡಿಸಲಾಯಿತು)

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ –2006.....

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಆಬ್ಜಕ್ಟೀವ್ಸ್‌ನಲ್ಲಿ ಇವರು ಏನು ಹೇಳುತ್ತಾರೆಂದರೆ, ತಾಲ್ಲೂಕು ಪಂಚಾಯಿತಿಗಳದ್ದು, ಆಡಿಟ್ ಆಗುವುದು ಲೇಟಾಗುತ್ತಿದೆ ಅದಕ್ಕಾಗಿ ಆ ವ್ಯಾಪ್ತಿಯನ್ನು ತೆಗೆದುಬಿಟ್ಟು ಜಿಲ್ಲಾ ಪಂಚಾಯಿತಿಗೆ ಸೀಮಿತ ಮಾಡಿ ಬಿಡಿ

ಎಂದು ಹೇಳಿ ಸಿ ಅಂಡ್ ಎಜಿ ಹೇಳಿರುವ ಆದೇಶದ ಮೇಲೆ ನಾವು ಈ ಅಮೆಂಡ್‌ಮೆಂಟ್‌ನ್ನು ತರುತ್ತಿದ್ದೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ತಾಲ್ಲೂಕು ಪಂಚಾಯಿತಿ ಸ್ಟ್ಯಾಚುಟರಿ ಆಡಿಟ್ಸ್ ಸಿ ಅಂಡ್ ಎಜಿ ಕೆಳಗಡೆ ಸ್ಟೇಟ್‌ಗೆ ಬರಬೇಕಾಗುತ್ತದೆ. ನೀವು ಅದನ್ನು ಜಿಲ್ಲಾ ಪಂಚಾಯಿತಿಗೆ ಮಿತಿ ಮಾಡುತ್ತೀರಾ? ಅಥವಾ ಜಿಲ್ಲಾ ಪಂಚಾಯಿತಿಯವರು ಕ್ರೋಢೀಕರಿಸಿ ನಿಮಗೆ ಕೊಡಬೇಕು ಎಂದು ಕೇಳುತ್ತೀರಾ ಎಂದು ಈ ಅಸ್ಪೆಕ್ಟ್‌ನಲ್ಲಿ ತಾವು ಹೇಳಿಲ್ಲ. ಇನ್ನು ಎರಡನೆಯದು ಪ್ರೋಸೆಸ್ ಅದು ಫರ್ದರ್ ಡಿಲೇ ಆಗುತ್ತದೆ. ಅಲ್ಲಿಂದ ನೀವು ಜಿಲ್ಲಾ ಪಂಚಾಯಿತಿಗೆ ತೆಗೆದುಕೊಂಡು ಹೋಗಿ ಜಿಲ್ಲಾ ಪಂಚಾಯಿತಿಯಿಂದ ಅಲ್ಲಿಗೆ ತರುವುದಕ್ಕೆ ಈ ಬಿಲ್ಲು ನಿಮಗೆ ಬೇಕಾ ಎಂದು ಹೇಳುತ್ತೇನೆ. ಇದನ್ನು ತಾವು ಮರುಪರಿಶೀಲನೆ ಮಾಡಬೇಕು.

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ, ಲೆಕ್ಕ ಪರಿಶೋಧನಾ ಅಕೌಂಟೆಂಟ್ ಜನರಲ್‌ರವರು ನಮಗೆ ತಿಳಿಸಿರುವ ಪ್ರಕಾರ 2001ನೇ ಇಸವಿಯಲ್ಲಿ ನಮಗೆ ಒಂದು ಪತ್ರವನ್ನು ಬರೆದು ತಿಳಿಸಿದ್ದಾರೆ. ಪ್ರತಿಯೊಂದು ತಾಲ್ಲೂಕು ಪಂಚಾಯಿತಿಗಳಿಂದ ಈ ಮಾಹಿತಿಯನ್ನು ಪಡೆದು ಈ ಕಾರ್ಯಕ್ರಮವನ್ನು ಆಡಿಟ್‌ಗೆ ತೆಗೆದುಕೊಳ್ಳುವುದರ ಬದಲಾಗಿ ನೇರವಾಗಿ ಜಿಲ್ಲಾ ಪಂಚಾಯಿತಿಯಲ್ಲಿ ಕ್ರೋಢೀಕರಿಸುವಂತಹ ಎಲ್ಲಾ ತಾಲ್ಲೂಕುಗಳ ವರದಿಯನ್ನು ತೆಗೆದುಕೊಂಡು ಇಲ್ಲಿಗೆ ಕಳುಹಿಸಬೇಕು ಎಂದು ತಿಳಿಸಿದ್ದರಿಂದ, ಇದನ್ನು ಮಾಡಿದ್ದೇವೆಯೇ ಹೊರತು ಇದರಲ್ಲಿ ಬೇರೆ ಏನು ಇಲ್ಲವೆಂದು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಆಯಾ ತಾಲ್ಲೂಕುಗಳದ್ದು ಮತ್ತು ಆಯಾ ಜಿಲ್ಲೆಗಳದ್ದು ಎಲ್ಲದರ ಮಾಹಿತಿಗಳನ್ನು ಪಡೆದುಕೊಂಡು ಇಲ್ಲಿಗೆ ಕಳುಹಿಸಬೇಕು. ನಂತರ ಅಕೌಂಟೆಂಟ್ ಜನರಲ್‌ರವರಿಂದ ವರದಿ ಬಂದ ಮೇಲೆ ವಿಧಾನಸಭೆಯಲ್ಲಿ ಮಂಡಿಸುವುದಕ್ಕೆ ಇದರಿಂದ ಅವಕಾಶವಾಗುತ್ತದೆಂಬ ಕಾರಣದಿಂದ ಇದನ್ನು ಮಾಡಿದ್ದೇವೆ. ಆದ್ದರಿಂದ ದಯವಿಟ್ಟು ಇದನ್ನು ಪರ್ಯಾಲೋಚಿಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ ; ಮಾನ್ಯ ಅಧ್ಯಕ್ಷರೆ, ಸ್ಟ್ಯಾಚುಟರಿ ಪ್ರಾವಿಷನ್ ಏನು ಹೇಳುತ್ತದೆ. ಡೈರಕ್ಟಾಗಿ ಪ್ರತಿಯೊಂದು ತಾಲ್ಲೂಕು ಪಂಚಾಯಿತಿ ಸಿಎಜಿ ಕೆಳಗಡೆ ಬರುತ್ತದೆಂದು ಹೇಳುತ್ತದೆ.

ಶ್ರೀ ಸಿ.ಎಂ. ಉದಾಸಿ : ಎಲ್ಲಾ ತಾಲ್ಲೂಕುಗಳು ಬರುತ್ತವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೆಡ್ ಆಫ್ ಅಕೌಂಟ್ ಬೇರೆ ಇದೆಯಲ್ಲಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಡೈರೆಕ್ಟಾಗಿ transaction ಮಾಡುವಂತಹ ಪವರ್‌ನ್ನು ಈ ಶಾಸನದಲ್ಲಿ ಕೊಟ್ಟಿರುವುದರಿಂದ ಜಡ್‌ಪಿಯವರು ಹೇಗೆ ಕ್ರೋಢೀಕರಿಸುತ್ತಾರೆ? ಇದರ ಬಗ್ಗೆ ತಾವು ಹೇಳಬೇಕಲ್ಲಾ? ಸಿ ಅಂಡ್ ಎಜಿಯವರಿಗೆ ಅನುಕೂಲವಾಗಲಿಲ್ಲ ಎಂದು ಶಾಸನಗಳನ್ನು ನೀವು ಬದಲಾವಣೆ ಮಾಡುವುದಕ್ಕಾಗುತ್ತದೆಯೇ? No. It is not operated by ZP. ---------- ---------- ಹೆಡ್ ಆಫ್ ಅಕೌಂಟ್ ಅವರಿಗೆ ಸಪರೇಟ್ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉದಾಸಿಯವರೆ ಒಂದು ನಿಮಿಷ ತಾಳಿ. ಈಗ ತಾಲ್ಲೂಕು ಪಂಚಾಯಿತಿ ಹೆಡ್ ಆಫ್ ಅಕೌಂಟ್ ಸಪರೇಟ್ ಇದೆ ಮತ್ತು ನಾವು ಇಲ್ಲಿ ಪಂಚಾಯತ್ ರಾಜ್ ಆಕ್ಟ್‌ನಲ್ಲಿ ಸಪರೇಟಾಗಿ ಶಾಸನ ಮಾಡಿರುವಂತಹದ್ದು. it is an independent body. It is not a subordinate body - ಆದ್ದರಿಂದ ನೀವು ಆಡಿಟ್ ಮಾಡುವಂತಹ ಸಂದರ್ಭದಲ್ಲಿ, ಲೆಕ್ಕ ಪರಿಶೋಧನೆ ಮಾಡುವಂತಹ ಸಂದರ್ಭದಲ್ಲಿ ನೀವು ಜಡ್‌ಪಿಯವರಿಗೆ ಉಬ್ಬಿಸಿಬಿಟ್ಟು ಆಮೇಲೆ ಜಡ್‌ಪಿಯವರ ಮುಖಾಂತರ ಇಲ್ಲಿ ಎಲ್ಲಾ ಕಳುಹಿಸಿ ಕನ್ಸಾಲಿಡೇಟ್ ಮಾಡಿ ಎಂದರೆ ಅದು ಫರ್ದರ್ ಡಿಲೇ ಆಗಬಹುದು ಮತ್ತು ನಾವೇ ಮಾಡಿರುವಂತಹ ಕಾನೂನಿಗೆ ವಿರೋಧವಾಗುತ್ತದೆ ಅಲ್ಲವೇ?

ಶ್ರೀ ಶಿವಾನಂದ ಎಸ್. ಪಾಟೀಲ್ : ಅದನ್ನು ಸ್ಟೇಟ್ ಅಕೌಂಟ್ಸ್‌ನವರು ಮಾಡುತ್ತಾರೆ.

ಶ್ರೀ ಸಿ.ಎಂ. ಉದಾಸಿ : ಸ್ಟೇಟ್ ಅಕೌಂಟ್ಸ್‌ನವರೇ ಮಾಡುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೌದು, ಇದನ್ನು ಸ್ಟೇಟ್ ಅಕೌಂಟ್ಸ್‌ನವರೆ ಮಾಡುತ್ತಾರೆ.

ಶ್ರೀ ಸಿ.ಎಂ. ಉದಾಸಿ : ಒಂದು ನಿಮಿಷ ತಾವು ಕೇಳಿ. ಕರ್ನಾಟಕ ಪ್ರಧಾನ ಮಹಾಲೇಖಪಾಲಕರು ತಮ್ಮ ಪತ್ರದಲ್ಲಿ ಹೇಳಿದ್ದಾರೆ. ಪ್ರತಿ ಜಿಲ್ಲಾ ಪಂಚಾಯಿತಿ ಅಡಿಯಲ್ಲಿ ಬರುವ ಎಲ್ಲಾ ತಾಲ್ಲೂಕು ಪಂಚಾಯಿತಿಗಳಿಂದ ಕ್ರೋಢೀಕೃತ ಅಡಿಟ್ ವರದಿಯನ್ನು ಸಿದ್ದಪಡಿಸುವುದು ಹೆಚ್ಚು ಸಮರ್ಪಕವಾಗುತ್ತದೆಂದು ವರದಿ ಮಾಡಿರುತ್ತಾರೆ. ಮುಂದುವರಿದು ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿ 175 ತಾಲ್ಲೂಕುಗಳ ಲೆಕ್ಕ ಪರಿಶೋಧನಾ ವರದಿಯನ್ನು ಕ್ರೋಢೀಕರಿಸಿ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಲ್ಲಿ ವಿಳಂಬವಾಗಬಹುದು. ಮತ್ತು ಎಲ್ಲಾ ತಾಲ್ಲೂಕು ಪಂಚಾಯಿತಿಗಳ ವಾರ್ಷಿಕ ಲೆಕ್ಕಪತ್ರಗಳು ಏಕಕಾಲದಲ್ಲಿ ಸಿದ್ದವಿರಲಾರದೆಂದು ತಿಳಿಸಿರುತ್ತಾರೆ. ಪ್ರತಿ ಜಿಲ್ಲಾ ಪಂಚಾಯಿತಿ ಅಡಿಯಲ್ಲಿ ಬರುವ ತಾಲ್ಲೂಕು ಪಂಚಾಯಿತಿಗಳ ವಾರ್ಷಿಕ ಲೆಕ್ಕ ಪತ್ರಗಳನ್ನು ಪ್ರಧಾನ ಮಹಾಲೇಖಪಾಲಕರು ಅಡಿಟ್-1 ಇವರಿಗೆ ಲೆಕ್ಕಪರಿಶೀಲನೆಗಾಗಿ ಮತ್ತು ಕ್ರೋಢೀಕರಿಸುವಂತಹ ವರದಿಯನ್ನು ಹೊರಡಿಸುವುದಕ್ಕಾಗಿ ಕಳುಹಿಸಿಕೊಡಬೇಕೆಂದು ತಿಳಿಸಲಾಗಿದೆ. ಆದ್ದರಿಂದ ಈ ಕೆಳಕಂಡ ತಿದ್ದುಪಡಿಯನ್ನು ಪ್ರಸ್ತಾಪಿಸಲಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ ; ಮಾನ್ಯ ಮಂತ್ರಿಗಳೆ, Is it not contrary to the ಪಂಚಾಯತ್ ರಾಜ್ ಆಕ್ಟ್?

ಶ್ರೀ ಸಿ.ಎಂ. ಉದಾಸಿ : ಅದು ಹಾಗೇ ಆಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಏಕೆ ಆಗುವುದಿಲ್ಲ. ಕ್ರೋಢೀಕರಿಸಿರುವಂತಹ ಆಡಿಟ್ ವರದಿಯನ್ನು ಜಿಲ್ಲಾ ಪಂಚಾಯಿತಿಯವರು ಕ್ರೋಢೀಕರಿಸಿ ಕಳುಹಿಸಬೇಕೆಂದು ಹೇಳುತ್ತೀರಿ, ಹೌದೋ ಅಥವಾ ಇಲ್ಲವೋ?

ಶ್ರೀ ಸಿ.ಎಂ. ಉದಾಸಿ : ಹೌದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದರೆ, ತಾಲ್ಲೂಕು ಪಂಚಾಯಿತಿ ಅಕೌಂಟ್ ಸಪರೇಟಾಗಿದೆ. ನೀವು ಕ್ರೋಢೀಕರಿಸಿದ ಮೇಲೆ ಅವರು ಹೇಗೆ ಮಾಡುವುದಕ್ಕಾಗುತ್ತದೆ? ಏನು ಡಬಲ್ ಅಡಿಟ್ ಮಾಡುತ್ತೀರಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರಿಗೆ ಏನು ಅಧಿಕಾರವಿದೆ? ನೀವು ಸ್ಪಷ್ಟವಾಗಿ ಹೇಳಬೇಕು. ಜಿಲ್ಲಾ ಪಂಚಾಯಿತಿಯವರು ತಾಲ್ಲೂಕು ಪಂಚಾಯಿತಿಯನ್ನು ಆಡಿಟ್ ಮಾಡುವುದಕ್ಕೆ ಅಧಿಕಾರ ಇದೆಯಾ? ಸಿ ಅಂಡ್ ಎಜಿ ಕೆಳಗಡೆ ಬರುವುದರಿಂದ ನೀವೇನು ಉದ್ದೇಶವನ್ನು ಹೇಳಿದ್ದೀರಿ. ಡಿಲೇ ಆಗುತ್ತದೆಂದು ಸಿ ಅಂಡ್ ಎಜಿಯವರು ರಿಕ್ವೆಸ್ಟ್ ಮಾಡಿಕೊಂಡಿದ್ದಾರೆಂದು ಹೇಳುತ್ತೀರಿ. ಅದು ಫರ್ದರ್ ಡಿಲೇ ಆಗುವುದಿಲ್ಲವೇ? ತಾಲ್ಲೂಕು ಪಂಚಾಯಿತಿಯಿಂದ ಸರ್ಕಾರಕ್ಕೆ ಬಂದು, ಆಡಿಟ್ ಆಗುತ್ತಿದ್ದು, ಸಿ ಅಂಡ್ ಎಜಿಗೆ ಬಂದು ಆಡಿಟ್ ಆಗುತ್ತಿತ್ತು. ಈಗ ಜಡ್‌ಪಿಯವರು ತೆಗೆದುಕೊಂಡು ಜಡ್‌ಪಿಯವರು ನಿಮಗೆ ಫರ್ದರ್ ಕಳುಹಿಸಬೇಕು. ಯಾವುದೋ ತಾಲ್ಲೂಕಿನದು ಬರಲಿಲ್ಲವೆಂದರೆ ಅಷ್ಟು ಜಿಲ್ಲೆಯಲ್ಲಿರುವ ತಾಲ್ಲೂಕುಗಳದ್ದು ಹೆಲ್ಡ್ ಆಫ್ ಆಗುತ್ತವೆ. ಇದರ ಉದ್ದೇಶಕ್ಕೂ ನೀವು ಇಟ್ಟಿರುವಂತಹ ಬಿಲ್‌ಗೂ ಏನಾದರೂ ತಾಳೇ ಆಗುತ್ತದೆಯೇ ಎಂಬುದರ ಬಗ್ಗೆ ಸ್ವಲ್ಪ ಯೋಚನೆಯನ್ನು ಮಾಡಬೇಕು.

ಶ್ರೀ ಸಿ.ಎಂ. ಉದಾಸಿ : ಈಗ ಏನಾಗುತ್ತದೆಂದರೆ ಎಲ್ಲಾ ರಿಪೋರ್ಟ್‌ಗಳನ್ನು ಈ ಹೌಸ್‌ನ ಎದುರುಗಡೆ ಇಡಬೇಕಾಗುತ್ತದೆ. 175 ತಾಲ್ಲೂಕುಗಳಿಂದ ಪಡೆಯುವುದರ ಬದಲಾಗಿ ಆಯಾ ಜಿಲ್ಲೆಯಲ್ಲಿರುವಂತಹ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಆಡಿಟ್ ವರದಿಯನ್ನು ಕ್ರೋಢೀಕರಿಸಿ ತರುವಂತಹ ವ್ಯವಸ್ಥೆಯನ್ನು ಮಾಡಿ ಇದನ್ನು ಮತ್ತೆ ಇಲ್ಲಿ ಮಂಡನೆ ಮಾಡಿದ್ದೇವೆ. ಇದರಿಂದ ಡಿಲೇ ಆಗುವುದಿಲ್ಲ. ಇದೇ ಶೀಘ್ರವಾಗಿ ಆಗುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಇದರಿಂದಾಗಿ ಏನು ಅಭಿಪ್ರಾಯ ಕೊಡುತ್ತದೆಂದರೆ, ತಾಲ್ಲೂಕು ಪಂಚಾಯಿತಿಗಳು ಜಿಲ್ಲಾ ಪಂಚಾಯಿತಿಗಳ ಅಧೀನದಲ್ಲಿರುತ್ತವೆ, ಎನ್ನುವಂತಹ ಅಭಿಪ್ರಾಯಕ್ಕೆ ಬರುತ್ತದೆ. ಆದರೆ ವಸ್ತುಶಃ ಜಿಲ್ಲಾ ಪಂಚಾಯಿತಿಗಳು ತಾಲ್ಲೂಕು ಪಂಚಾಯಿತಿಗಳು ಗ್ರಾಮಪಂಚಾಯಿತಿಗಳು ತಮ್ಮ ತಮ್ಮಷ್ಟಕ್ಕೆ ತಾವು ಸ್ವಾಯತ್ತ ಸಂಸ್ಥೆಗಳು. ಹೀಗೆ ಎಸ್‌ಜೆಆರ್‌ವೈ ಇದೆ. ಇದು ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗೆ ಬೇರೆ ಇದೆ. ಕೆಲವು ಯೋಜನೆಗಳನ್ನು ಜಡ್‌ಪಿಯವರು ಟಿಪಿಎಸ್ ಮುಖಾಂತರ ಎಕ್ಸಿಕ್ಯೂಟ್ ಮಾಡುತ್ತಾರೆ. ಇಂಜಿನಿಯರಿಂಗ್ ಡಿವಿಜನ್‌ನಲ್ಲಿ ಅಷ್ಟೆ. ನೀವು ಯಾವ ತರಹದ ಅಭಿಪ್ರಾಯದಲ್ಲಿ ಇದನ್ನು ಊಹೆಯಲ್ಲಿ ಮಾಡಿದ್ದಿರೆಂದರೆ, ಸಬಾರ್ಡಿನೇಟ್ ಬಾಡಿ ತರುವ ಹಾಗೆ ಮಾಡಿದ್ದೀರಿ. ಇದು ಸಾಧ್ಯವಾಗುವುದಿಲ್ಲ. ಇದು ಸಪರೇಟಾಗಿ ಆಗಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತಾರೆ. ವಿಕೇಂದ್ರೀಕರಣ ಇರಬೇಕೆಂದು ಮಾತನಾಡುವುದಾದರೆ ಜಿಲ್ಲಾ ಪಂಚಾಯಿತಿಯ ಅಧೀನದಲ್ಲಿ ತಾಲ್ಲೂಕು ಪಂಚಾಯಿತಿ ಇರಬೇಕೆನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ನೀವೇನು ವಿಕೇಂದ್ರೀಕರಣದ ಬಗ್ಗೆ ಬಹಳ ಉದ್ದುದ್ದ ಭಾಷಣ ಮಾಡುವವರು ಅವರ ಅಡಿಯಲ್ಲಿ ಅವರದೇ ಸ್ವತಂತ್ರ ಸಂಸ್ಥೆ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮಪಂಚಾಯಿತಿ ಅವರದೇ ಆದಂತಹ ವಿಚಾರಗಳು ಇವೆ. ಜಿಲ್ಲಾ ಪಂಚಾಯಿತಿಯೂ ಅವರದೆ ಆಗಿದೆ. ಆ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯಿತಿಗೆ ಬರತಕ್ಕಂತಹ ಎಲ್ಲಾ ತಾಲ್ಲೂಕು ಪಂಚಾಯಿತಿಗಳು ಇದರ ಅಧೀನಕ್ಕೆ ಬರುವುದು ಎಂದರೆ, ಅದು ಒಳ್ಳೆಯ ಸೂಚನೆಯಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಇದು ಸಪರೇಟಾಗಿ ಆಗಬೇಕು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, It will be contradictory to the Panchayath Raj Act. ಏಕೆಂದರೆ, ಮೊದಲು ಜಿಲ್ಲಾ ಪರಿಷತ್ತು ಇತ್ತಲ್ಲಾ, ಆ ಆಕ್ಟ್‌ಗೆ ಅಲ್ಲ ಇದು. ಇದು ಪಂಚಾಯತ್‌ರಾಜ್ ಆಕ್ಟ್ ಇದು. ಹಾಗಾಗಿ ತ್ರಿಟೈರ್ ಸಿಸ್ಟಮ್‌ನ್ನು ಮಾಡತಕ್ಕಂತಹ ಸಂದರ್ಭದಲ್ಲಿ 17th Constitution ಅಮೆಂಡ್‌ಮೆಂಟ್‌ನಲ್ಲಿ each body is having separate identity. ಒಂದು ನಿಮಿಷ ಕೇಳಿ. ಈಗ ಹಿಂದಿನ ಜಿಲ್ಲಾ ಪರಿಷತ್ತಿನಲ್ಲಿ Taluk Panchayath was not an elected body, whereas in Panchayath Raj Act, Taluk Panchayath is an elected body directly from the masses. Zilla Panchayath, Taluk Panchayath /Grama Panchayath ಸಪರೇಟಾಗಿ ಆಡಳಿತ ಪ್ರಾಂತ್ಯದಲ್ಲಿ ಇಂಡಿಪೆಂಡೆಂಟಾಗಿ ಎಲೆಕ್ಟ್ ಆಗುತ್ತದೆ. So, actually they are separate bodies. - - - - - - - - - - - - - - - ನೀವು ತಾಲ್ಲೂಕು ಪಂಚಾಯಿತಿಯ ಲೆಕ್ಕಪರಿಶೋಧನೆಯನ್ನು ಜಿಲ್ಲಾ ಪಂಚಾಯಿತಿಗೆ ಒಪ್ಪಿಸಿ.

ಅಧ್ಯಕ್ಷರು : ಇಂಟ್ರಡಕ್ಷನ್ ಸ್ಟೇಜ್‌ನಲ್ಲಿ ಚರ್ಚೆ ಏತಕ್ಕೆ? ಪರ್ಯಾಲೋಚನೆ ಸಂದರ್ಭದಲ್ಲಿ ಮಾತನಾಡಿ.

ಶ್ರೀ ಸಿ.ಎಂ. ಉದಾಸಿ : ಇದರೊಳಗೆ ಏನಿದೆ ಎಂದರೆ, ಸಿಎಜಿಯವರೆ ಆಡಿಟ್ ಮಾಡುವುದು ಏನಿದೆ, ಅವರೇ ಆಡಿಟ್ಟನ್ನು ಮಾಡಬೇಕು. ಬೇರೆಯವರು ಮಾಡುವ ಹಾಗಿಲ್ಲ. ತಾಲ್ಲೂಕು ಪಂಚಾಯಿತಿಗಳದು ಜಿಲ್ಲಾ ಪಂಚಾಯಿತಿಯವರು ಆಡಿಟ್ ಮಾಡುವ ಹಾಗಿಲ್ಲ. ತಾಲ್ಲೂಕು ಪಂಚಾಯಿತಿಗಳ ಎಲ್ಲಾ ಲೆಕ್ಕಪತ್ರಗಳನ್ನು ಕ್ರೋಢೀಕರಿಸುವಂತಹ ಕೆಲಸವನ್ನು ಆ ಜವಾಬ್ದಾರಿಯನ್ನು ಕೊಡುವುದರ ಸಲುವಾಗಿ, ಆ ಕ್ರೋಢೀಕರಿಸಿರುವಂತಹ ಲೆಕ್ಕಪತ್ರಗಳನ್ನು ಕಳುಹಿಸುವಂತಹ ವ್ಯವಸ್ಥೆ ಮಾಡುವುದು ಒಂದೇ ಆಗಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನೀವು ಆಡಳಿತಾತ್ಮಕವಾಗಿ ಒಂದು ಸರ್ಕ್ಯುಲರ್‌ನ್ನು ಕಳುಹಿಸಿ ಅದನ್ನು ಮಾಡಬಹುದು. ಅದಕ್ಕೆ ಬಿಲ್ ಅಮೆಂಡ್‌ಮೆಂಟ್ ಆಗಬೇಕಾಗಿಲ್ಲ.

ಶ್ರೀ ಜಯಪ್ರಕಾಶ್‌ಹೆಗ್ಡೆ ; ಮಾನ್ಯ ಉದಾಸಿಯವರೆ, ಈಗ ತಾವು ಏನು ಹೇಳಿದ್ದೀರಿ. ಪ್ರಧಾನ ಮಹಾಲೇಖಪಾಲಕರ ಅಭಿಪ್ರಾಯಕ್ಕೆ ಅನುಗುಣವಾಗಿ ಪ್ರತಿಯೊಂದು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ತಾಲ್ಲೂಕು ಪಂಚಾಯಿತಿಗಳನ್ನು ಒಳಗೊಂಡಂತೆ ಕ್ರೋಢೀಕೃತ ಲೆಕ್ಕ ಪರಿಶೋಧನಾ ವರದಿಯನ್ನು ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಸಿದ್ದಪಡಿಸಲು ಸೂಕ್ತವೆಂದು ಪರಿಗಣಿಸಲಾಗಿದೆ ಎನ್ನುವುದನ್ನು ಜಿಲ್ಲಾ ಮಟ್ಟದಲ್ಲಿ ಬರೀ ತಾಲ್ಲೂಕು ಪಂಚಾಯಿತಿ ಒಳಗೊಂಡಿದ್ದು, ಜಿಲ್ಲಾ ಮಟ್ಟದ್ದು ಬೇರೆಯಾಗುತ್ತದೆ. ಜಿಲ್ಲಾ ಪಂಚಾಯ್ತಿದು ಅದರ ಕೆಳಗಡೆ ಬರುತ್ತದೆಂಬ ಅಭಿಪ್ರಾಯಕ್ಕೆ ಕೊಡುತ್ತಿದ್ದೀರಿ. ಒಂದು ಜಿಲ್ಲೆಗೆ ಬರುವಂತಹ ಎಲ್ಲಾ ತಾಲ್ಲೂಕು ಪಂಚಾಯಿತಿಗಳನ್ನು ಕ್ರೋಢೀಕರಿಸುವಂತಹ ಅಭಿಪ್ರಾಯ ನಿಮ್ಮದಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಗೆ ಬರುತ್ತದೆಂಬ ಅಭಿಪ್ರಾಯವನ್ನು ಕೊಡಬೇಡಿ.

ಶ್ರೀ ಶಿವಾನಂದ ಎಸ್. ಪಾಟೀಲ್: ಅಬ್ಸರ್‌ವೇಷನ್ ಮಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮೊದಲು ಬಿಲ್ ಇಂಟ್ರಡ್ಯೂಸ್ ಮಾಡಲಿ, ಆನಂತರ ಕನ್ಸಿಡರೇಷನ್ ಸ್ಟೇಜ್‌ನಲ್ಲಿ ಚರ್ಚೆ ಮಾಡಬಹುದು.

ಅಧ್ಯಕ್ಷರು: ಮೊದಲು ಬಿಲ್‌ನ್ನು ಇಂಟ್ರಡ್ಯೂಸ್ ಮಾಡಲಿ, ಕನ್ಸಿಡರೇಷನ್ ಸ್ಟೇಜ್‌ನಲ್ಲಿ ಚರ್ಚೆ ಮಾಡಬಹುದು.

ಶ್ರೀ ಜಗದೀಶ್ ಶೆಟ್ಟರ್: ಕನ್ಸಿಡರೇಷನ್ ಸ್ಟೇಜ್‌ನಲ್ಲಿ ಎಲ್ಲಾ ಅಭಿಪ್ರಾಯಗಳನ್ನು ಮಾನ್ಯ ಸದಸ್ಯರು ಕೊಡಬಹುದು ಆನಂತರ ಸರ್ಕಾರವು ಕೂಡ ತನ್ನ ಅಭಿಪ್ರಾಯವನ್ನು ಹೇಳುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಂಟ್ರಡಕ್ಷನ್ ಸ್ಟೇಜ್‌ನಲ್ಲಿ ತಕರಾರು ಮಾಡಬೇಕೆಂಬ ಉದ್ದೇಶದಿಂದಲೇ ತಕರಾರು ಮಾಡುತ್ತಿದ್ದೇವೆ.

ಅಧ್ಯಕ್ಷರು : ಇಲ್ಲ. It is a matter of convention.

ಶ್ರೀ ಜಗದೀಶ್ ಶೆಟ್ಟರ್: ಬಿಲ್‌ನ್ನ ಇಂಟ್ರಡ್ಯೂಸ್ ಮಾಡುವುದಕ್ಕೂ ಬಿಡದೆ ಇದ್ದರೆ ಹೇಗೇ?

ಶ್ರೀ ಜೆ.ಸಿ. ಮಾಧುಸ್ವಾಮಿ: ಬಿಲ್ಲನ್ನು ತಂದಿರತಕ್ಕಂತಹ ಉದ್ದೇಶಗಳಲ್ಲಿ ಸರಿ ಕಾಣದೆ ಇರತಕ್ಕಂತಹ ಮಸೂದೆಯನ್ನು ನಾವು ಮಂಡನೆ ಸಂದರ್ಭದಲ್ಲಿಯೇ ತಕರಾರು ಮಾಡಬೇಕಾಗುತ್ತದೆ. ಕನ್ಸಿಡರೇಷನ್ ಸ್ಟೇಜ್‌ನಲ್ಲಿ ತಕರಾರು ಮಾಡುವುದಲ್ಲ. ದಯಮಾಡಿ ಕಾಲ್ ಅಂಡ್ ಶಕ್ದರ್ ನಿಯಮಾವಳಿ ಪುಸ್ತಕವನ್ನು ತೆಗೆದುನೋಡಿ. ನಾವೇನು ಸುಮ್ಮನೆ ತಕರಾರು ಮಾಡುವುದಕ್ಕೆ ಹೋಗಿಲ್ಲ. ಬಿಲ್‌ನಲ್ಲಿ ಇರತಕ್ಕಂತಹ ಉದ್ದೇಶಗಳೇ ರಿಪೀಟ್ ಆಗುತ್ತಿದೆ ಅಂದರೆ ನೀವು ಹೇಳಿರುವಂತಹ ಉದ್ದೇಶವೇ ಬೇರೆ. ಇಲ್ಲಿರುವುದೇ ಬೇರೆಯಾಗಿದೆ. ಕಾಲ್ ಅಂಡ್ ಶಕ್ದರ್ ಪುಸ್ತಕದಲ್ಲಿ 446 ಅಥವಾ 462 ನಿಯಮದಲ್ಲಿ ಇದೆ ತೆಗೆದುನೋಡಿ. ಉದ್ದೇಶಗಳಲ್ಲಿ ಕಾಂಟ್ರಡಿಕ್ಷನ್ ಆದಾಗ ಇಂಟ್ರಡಕ್ಷನ್ ಸಂದರ್ಭದಲ್ಲಿ ತಕರಾರು ಮಾಡಬೇಕಾಗುತ್ತದೆ. ಆಮೇಲೆ ಮಾಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು: ಇಲ್ಲ. Even in Keul & Shekdhar, as a matter of convention, ಇಂಟ್ರಡಕ್ಷನ್ ಸ್ಟೇಜ್‌ನಲ್ಲಿ ಅದನ್ನು ನಾರ್ಮಲ್ ಅಪೋಸ್ ಮಾಡಬಾರದು ಎನ್ನುವಂತಹ ರೀತಿಯಲ್ಲಿಯೇ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಕೌಲ್ ಅಂಡ್ ಶಕ್ದರ್ ಪುಸ್ತಕವನ್ನು ತೆಗೆದುಕೊಡಿ ನಾನು ತೋರಿಸುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಇಲ್ಲಿ ಅವರಿಗೆ ಬಂದಿರುವ ಅನುಮಾನಗಳೇನೆಂದರೆ ಪ್ರತಿಯೊಂದು ಜಿಲ್ಲಾ ಪಂಚಾಯಿತಿಯಲ್ಲಿ ಬರುವ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕ್ರೋಢೀಕೃತ ಲೆಕ್ಕ ಪರಿಶೋಧನಾ ವರದಿಯನ್ನು ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಸಿದ್ಧಪಡಿಸುವುದು ಎನ್ನುವುದು ಇರಬಾರದಾಗಿತ್ತು ಅಂದರೆ ಅದರಲ್ಲಿ "ಸಿದ್ಧಪಡಿಸುವುದು" ಇರಬಾರದಾಗಿತ್ತು ಎನ್ನುವುದು. ಅಂದರೆ ಅಲ್ಲಿ ಆಡಿಟ್ ಆಗಿ ಬರತಕ್ಕಂಥ ಅನುಮಾನ

ತಮಗೆ ಇದೆ ಎಂಬುದು ನನ್ನ ಭಾವನೆಯಾಗಿದೆ. "ಅಲ್ಲಿ ಕ್ರೋಢೀಕರಿಸಿ ರಾಜ್ಯಕ್ಕೆ ಕಳುಹಿಸಬೇಕು" ಎಂಬುದು ಆಗಬೇಕಾಗಿತ್ತು. ಅದನ್ನು ಬೇಕಾದರೆ ತಿದ್ದುಪಡಿ ಮಾಡಬಹುದು, ಇದರ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ ಏನಿದೆ, ಅದರಲ್ಲಿ ಇದನ್ನು ಸೇರಿಸಿ ಮಾಡಬಹುದು.

ಅಧ್ಯಕ್ಷರು: ಮಾನ್ಯ ಉದಾಸಿಯವರೇ ಅದನ್ನು ಸೇರಿಸಿ ಮಾಡಬಹುದು ಅದನ್ನು ಆಮೇಲೆ ತೆಗೆದುಕೊಳ್ಳೋಣ ಬಿಡಿ. ಆ ಅಮೆಂಡ್‌ಮೆಂಟ್ ಅನ್ನು ಸೇರಿಸಿ ಆಮೇಲೆ ತೆಗೆದುಕೊಳ್ಳೋಣ. ಈಗ ಮಾನ್ಯ ಜಗದೀಶ್ ಶೆಟ್ಟರ್ ನಿಮ್ಮ ಬಿಲ್ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2005 ಕನ್ಸಿಡರೇಷನ್‌ಗೆ ಇದೆ.

ಆ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು.

2. ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಹಾಗು ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೆ, 2005ನೇ ಸಾಲಿನ ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಹಾಗು ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೆ, 2005 ನೇ ಸಾಲಿನ ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕದ ಬಗ್ಗೆ ಸದನದಲ್ಲಿ ಒಪ್ಪಿಗೆಯನ್ನು ತೆಗೆದುಕೊಳ್ಳಲಿಕ್ಕೆ ನಾನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳುತ್ತಿದ್ದೇನೆ. ಈ ಒಂದು ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2005 ಇದರಲ್ಲಿ ಸೆಕ್ಷನ್ 69, ಇದು Disposal of lands or other property belonging to the State Government by Public Auction, ಸರ್ಕಾರದ ಭೂಮಿಯನ್ನು ಪಬ್ಲಿಕ್ ಆಕ್ಷನ್ ಮೂಲಕ ಮಾರಾಟ ಮಾಡಲಿಕ್ಕೆ ಇವತ್ತು ಪ್ರಮುಖವಾಗಿ ಈ ತಿದ್ದುಪಡಿಯನ್ನು ನಾನು ತರುತ್ತಿದ್ದೇನೆ. ಸೆಕ್ಷನ್ 69ರ ಪ್ರಕಾರ "Disposal of land or other property belonging to the State Government under Section 67" ಆಕ್ಷನ್ ಮಾಡಲಿಕ್ಕೆ 30 ದಿನಗಳೊಳಗೆ ಕನ್‌ಫರ್ಮೇಷನ್ ಮಾಡಲು ಪ್ರಾವಿಷನ್ ಮಾಡಲಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಯಿತು. ಇದನ್ನು ಓದಿದ್ದೀರಿ, ಇದಕ್ಕೇನು ತಕರಾರು ಇಲ್ಲದೇ ಹೋದರೂ ಏಕೆ ಓದಿಕೊಂಡು ನಿಂತುಕೊಂಡಿದ್ದೀರಿ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ: ಸರ್ಕಾರಿ ಜಮೀನುಗಳನ್ನು ಆಕ್ಷನ್ ಮೂಲಕ ಡಿಸ್‌ಪೋಸಲ್ ಮಾಡಲಿಕ್ಕೆ ಯಾರದೇ ಅಭ್ಯಂತರವಿಲ್ಲ, ಆದರೆ ಕೆಲವು ಸಂಘಸಂಸ್ಥೆಗಳಿಗೆ, ಚಾರಿಟಬಲ್ ಸಂಸ್ಥೆಗಳಿಗೆ, ಕೆಲವು ವೀಕರ್ ಸೆಕ್ಷನ್‌ನ ಕಮ್ಯುನಿಟಿ ಹಾಲ್‌ಗಳಿಗೆ ಸರ್ಕಾರಿ